**ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ**

**ಎಂವಿಸಿ ಸಂಖ್ಯೆ: 118/2019**

PW-2

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ: 08.01.2021**

**ಮುಖ್ಯವಿಚಾರಣೆ ಅರ್ಜಿದಾರರ ಪರ ಶ್ರೀ ಕೆ.ಎಸ್.ಆರ್, ವಕೀಲರಿಂದ:**

ನನ್ನ ಮುಖ್ಯ ವಿಚಾರಣೆಯ ವಿಷಯವಾಗಿ ನಾನು ನ್ಯಾಯಾಲಯದಲ್ಲಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ವಿಷಯಗಳನ್ನು ಓದಿಸಿ ತಿಳಿದುಕೊಂಡಿದ್ದು, ಆ ವಿಷಯ ಸರಿ ಹಾಗೂ ಸತ್ಯವಾಗಿರುತ್ತವೆ ಅಂತ ಒಪ್ಪಿ ಮನವರಿಕೆ ಮಾಡಿಕೊಂಡು ಪ್ರಮಾಣಪತ್ರಕ್ಕೆ ನನ್ನ ಸಹಿ ಮಾಡಿರುತ್ತೇನೆ.

**ಪಾಟೀಸವಾಲು 2 ನೇ ಎದುರುದಾರರ ಪರ ಶ್ರೀ ಕೆ.ಡಿ.ಡಿ, ವಕೀಲರಿಂದ:**

2. ನಾನು ಯಾವುದಾದರೂ ಸಿಕ್ಕ ಕೂಲಿ ಕೆಲಸ ಮಾಡುತ್ತೇನೆ. ನನಗೆ ಮೃತ ರಾಜೇಶನ ಪರಿಚಯವಿದ್ದು ಆತನ ಮನೆಗೂ ನಮ್ಮ ಮನೆಗೂ ಅಂದಾಜು 100 ಮೀಟರ್ ಅಂತರವಿದೆ. ನನಗೆ ಮೃತ ರಾಜೇಶನು ಚಿಕ್ಕಂದಿನಿಂದಲೂ ಪರಿಚಯವಿದೆ. ಅಪಘಾತವಾದ ದಿನದಂದು ಕೆಸುವಿನಗೆಡ್ಡೆಯನ್ನು ಕೀಳಲು ಕೆಲಸಕ್ಕೆ ಹೋಗಿದ್ದೆ. ಆ ದಿನ ನಾವು 6 ಜನ ಕೆಲಸಕ್ಕೆ ಹೋಗಿದ್ದೆವು. ನಾನು, ಸಾಗರ್, ಗೌತಮ್, ಧನು, ಅನೂಪ್ ರಾಜ್ ಹಾಗೂ ಶಿವಪುತ್ರ ಇವರೆಲ್ಲಾ ಹಾಸನದಿಂದ ಸುಮಾರು 15 ಕಿ.ಮೀ ದೂರವಿರುವ ಹಳ್ಳಿಗೆ ಕೆಲಸಕ್ಕೆ ಹೋಗಿದ್ದೆವು. ನಮ್ಮ ಮನೆಗೂ ಕೆಲಸಕ್ಕೆ ಹೋದ ಸ್ಥಳಕ್ಕೂ ಅಂದಾಜು 75 ಕಿ.ಮೀ ಅಂತರವಿದೆ. ನಾವು ಬೆಳಿಗ್ಗೆ 6 ಗಂಟೆಗೆ ಕೆಲಸಕ್ಕೆ ಹೋಗುತ್ತೇವೆ. ನಾನು 4 ದಿನದಿಂದ ಕೆಲಸಕ್ಕೆ ಹೋಗುತ್ತಿದ್ದೆನು. ನಾವು ಮಹೇಂದ್ರ ಜೀತೋ ವಾಹನದಲ್ಲಿ ಕೆಲಸಕ್ಕೆ ಹೋಗುತ್ತಿದ್ದೆವು. ಮಂಜುನಾಥ ಇವನು ವಾಹನ ಚಾಲನೆ ಮಾಡುತ್ತಿದ್ದ. ಮಂಜುನಾಥನ ಮನೆಗೂ, ನಮ್ಮ ಮನೆಗೂ 2 ಕಿ.ಮೀ ಅಂತರವಿದೆ. ಆ ವಾಹನ ಮೋಹನ್ ಎನ್ನುವವರಿಗೆ ಸೇರಿದ್ದು ಇರುತ್ತದೆ. ನಮ್ಮ ಮನೆಗೂ, ಮೋಹನ್ ಇವರ ಮನೆಗೂ 2 ಕಿ.ಮೀ ಅಂತರವಿದೆ. ಮೋಹನ್ ಇವನು ವಾಹನ ಚಾಲನೆ ಮಾಡಿದ್ದನ್ನು ನಾನು ನೋಡಿಲ್ಲ. ನಾವು ವಾಪಸ್ಸು ಬರುವಾಗ ಸಂಜೆ 6.30 ಗಂಟೆಗೆ ಅಪಘಾತವಾಗಿತ್ತು. ಅಪಘಾತವು ಚಾಲಕನ ತಪ್ಪಿನಿಂದ ಆಗಿತ್ತು. ಆ ದಿನ ನಾವು ಹಿಂದೆ ಕುಳಿತಿದ್ದೆವು. ಆ ವಾಹನವು ಸರಕು ಸಾಗಾಣೆಯ ವಾಹನವಿದ್ದು, ಹಿಂದುಗಡೆ ಆಸನಗಳ

ವ್ಯವಸ್ಥೆ ಇರಲಿಲ್ಲ. ಆ ದಿನ ಆ ವಾಹನದಲ್ಲಿ ಯಾವುದೇ ಸರಕು, ಸಾಮಾನುಗಳು ಇರಲಿಲ್ಲ. ಚಾಲಕ ಮತ್ತು ರಾಜೇಶನು ಮುಂದಿನ ಸೀಟಿನಲ್ಲಿ ಕುಳಿತಿದ್ದರು. ಮುಂದಿನ ಸೀಟಿನಲ್ಲಿ 3 ಜನ ಕುಳಿತುಕೊಳ್ಳಬಹುದು. ಆ ವಾಹನದಲ್ಲಿ ಎಷ್ಟು ಜನ ಕುಳಿತುಕೊಳ್ಳೆಂಬ ನಿಯಮ ನನಗೆ ಗೊತ್ತಿಲ್ಲ. ಆ ವಾಹನವು ಸರಕು ಸಾಮಾನುಗಳನ್ನು ಸಾಗಿಸುವ ವಾಹನವಿದ್ದು, ಪ್ರಯಾಣಿಕರು ಪ್ರಯಾಣಿಸಬಾರದು ಎಂದರೆ ನಿಜ. ಆ ವಾಹನದ ಮುಂದಿನ ಎರಡೂ ಬದಿಗಳಿಗೆ ಬಾಗಿಲುಗಳಿದ್ದವು. ಆ ದಿನ ವಾಹನವು ಪಲ್ಟಿ ಆಗಿ ರಸ್ತೆಯ ಎಡಬದಿಗೆ ಬಿದ್ದಿತ್ತು. ಅಪಘಾತವಾದ ಬಳಿಕ ರಾಜೇಶನು ಗಾಯಗೊಂಡು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಅಪಘಾತವಾದ ತಕ್ಷಣ ಪೊಲೀಸರಿಗೆ ದೂರು ನೀಡಿಲ್ಲ. ಆ ದಿನ ಮಂಜುನಾಥ ಎನ್ನುವವನು ವಾಹನ ಚಾಲನೆ ಮಾಡುತ್ತಿದ್ದನೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಮಾಲೀಕ ಮೋಹನ್ ವಾಹನವನ್ನು ಚಾಲನೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ಮಾಲೀಕ ಮೋಹನ್ ಈತನ ಚಾಲನ ಪತ್ರ ಇರಲಿಲ್ಲ ಆಗಾಗಿ ಮಂಜುನಾಥ ಎನ್ನುವವನು ಚಾಲನೆ ಮಾಡುತ್ತಿದ್ದನೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮೋಹನ್ ಈತನ ಪರಿಚಯವಿದೆ. ಆ ದಿನ ನನ್ನ ಎಡಭುಜಕ್ಕೆ ಪೆಟ್ಟು ಆಗಿತ್ತು. ನಾನು ಕೊಣನೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ವಾಹನವು ಎಷ್ಟು ಪಲ್ಟಿ ಆಯಿತು ಎನ್ನುವುದು ನನಗೆ ಗೊತ್ತಿಲ್ಲ. ಮಂಜುನಾಥನಿಗೂ ಗಾಯವಾಗಿದ್ದು ಆತನು ಚಿಕಿತ್ಸೆ ಪಡೆದಿರಬಹುದು. ಮಂಜುನಾಥನಿಗೆ ಚಿಕ್ಕಪುಟ್ಟ ಗಾಯಗಳಾಗಿದ್ದು ನಾನು ನೋಡಿದ್ದೆ. ವಾಹನದ ಮುಂಭಾಗವು ಜಖಂ ಆಗಿದ್ದು, ಬೇರೆ ಭಾಗಗಳಿಗೆ ಜಖಂ ಆಗಿರಲಿಲ್ಲ. ರಾಜೇಶ ಈತನು ವಾಹನದಲ್ಲಿ ಕ್ಲೀನರ್ ಎಂದು ಕೆಲಸ ಮಾಡುತ್ತಿದ್ದನೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಜೇಶ ಈತನು ವಾಹನದಲ್ಲಿ ಪುಕ್ಕಟ್ಟೆಯಾಗಿ ಪ್ರಯಾಣಿಸುತ್ತಿದ್ದ ಎಂದರೆ ಸರಿಯಲ್ಲ.

3. ಆ ದಿನ ನಾನು ಆ ವಾಹನದಲ್ಲಿ ಇರಲಿಲ್ಲ, ಅಪಘಾತವನ್ನು ನೋಡಿಲ್ಲ ಎಂದರೆ ಸುಳ್ಳು. ನಾನು ರಾಜೇಶ ಹಾಗೂ ಅವರ ಕುಟುಂಬದವರು ಪರಿಚಯವಿರುವ ಕಾರಣ ಅವರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು 1 ನೇ ಎದುರುದಾರರ ಪರ ಶ್ರೀ ಬಿ.ಎಸ್.ಆರ್, ವಕೀಲರಿಂದಃ</u>**

4. ವಾಹನದ ಚಾಲಕನು ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ

ನಡೆಯಿಸಿ ಅಪಘಾತ ಪಡಿಸಿದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ಚಾಲಕನ ತಪ್ಪಿನಿಂದ ಆಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನು ಕೂಡ ಆ ವಾಹನದಲ್ಲಿ ಹೊರಟಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ವಾಹನದಲ್ಲಿ ಚಾಲಕ ಹಾಗೂ ಕ್ಲೀನರ್ ಇಬ್ಬರೇ ಇದ್ದರು ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ